



# ವಸಂತ ಕಾಲ ಬಂದಾಗ..

■ ಚಿತ್ರ-ಬರಹ:
ಗ. ಮ. ತುಂಬೇಮನೆ

ಎಲ್ಲೆಲ್ಲೂ ಹೊಸ ಚಿಗುರುಗಳ ಸಂಭ್ರಮ ನಮಗೆ ವಸಂತಾಗಮನದ ಸೂಚನೆ ನೀಡುತ್ತದೆ. ಮರಗಿಡಗಳಂತೂ ಪೈಪೋಟಿಗೆ ಬಿದ್ದವರಂತೆ ಹೊಸ ಹೊಸ ವರ್ಣಗಳ ಚಿಗುರು ಹೊರಡಿಸಿ ಬಿಡುತ್ತವೆ. ಇಡೀ ಪ್ರಕೃತಿಯೇ ಬಹು ವರ್ಣಗಳಿಂದ ಸಿಂಗಾರಗೊಂಡು ನವೀಕರಣವಾಗಿ ಬಿಡುತ್ತದೆ.

ವಸಂತ ಮಾಸ ಸಕಲ ಜೀವರಾಶಿಗಳಿಗೂ ಚೈತನ್ಯವನ್ನೀಯುತ್ತದೆ. ಕೋಗಿಲೆಯ ಪಂಚಮಸ್ವರದ ಹಾಡು ಮಧ್ಯಾಹ್ನದ ಬಿರು ಬಿಸಿಲಲ್ಲೂ ತಣ್ಣನೆ ಅನುಭವ ನೀಡುತ್ತದೆ. ನಸುಕಿನ ಇಬ್ಬನಿಯ ಮಂದ ಬೆಳಕಿನಲ್ಲಿ ವೈವಿಧ್ಯಮಯ ಹೂಗಳ ಪರಿಮಳದ ಕಂಪಿನ ಆಸ್ವಾದನೆಯೇ ಆಹ್ಲಾದಕರ. ಹೂವುಗಳ ಮಕರಂದ ಕಂಡು ಹೀರಲು ಹಕ್ಕಿಗಳು ಚಿಲಿಪಿಲಿಗುಟ್ಟಿ ತಮ್ಮ ಬಳಗವನ್ನು ಕರೆಯಲು ಪ್ರಾರಂಭಿಸುತ್ತವೆ. ವಸಂತದ ಸಂತಸ ಹೀಗೆ ಬೆಳಿಗ್ಗೆಯ ಚುಮುಚುಮು ನಸುಕಿನಲ್ಲೇ ಪ್ರಾರಂಭವಾಗಿಬಿಡುತ್ತದೆ.

ಎಲ್ಲೆಲ್ಲೂ ಚಿಗುರಿ ಸಿಂಗಾರಗೊಂಡ ಪ್ರಕೃತಿಗೆ ಬಾನಲ್ಲಿ ಅಲ್ಲಲ್ಲಿ ಸುಳಿಯುವ ದಟ್ಟ ಮೇಘಗಳು ಹೊಸ ಸಂದೇಶ ನೀಡಿ ಚೈತನ್ಯವನ್ನು ನೀಡುತ್ತವೆ. ಕ್ಯಾಮರಾ ಕಣ್ಣಿಗಂತೂ ಹಬ್ಬ. ಹೊಳೆವ ಚಿಗುರುಗಳ ಮೋಹಕತೆಯನ್ನು ಸೆರೆ ಹಿಡಿಯಲು ನಾವು ತಯಾರಿ ಮಾಡಿಕೊಳ್ಳಬೇಕು. ಬೆಳಿಗ್ಗೆಯಿಂದಲೇ ಉಲಿಯುತ್ತಾ, ಮಧ್ಯಾಹ್ನದ ಬಿರು ಬಿಸಿಲಲ್ಲಿ ಬಸವಳಿದ ಪುಟ್ಟ ಹಕ್ಕಿಗಳ ನೀರಿನಾಟ ನೋಡಲು ವಸಂತವೇ ಬರಬೇಕು.